# All India Radio: Bangalore
# National Bulletin In Kannada
# 28.02.2025  07.35 a.m.

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

******************

ಮುಖ್ಯಾಂಶಗಳು

1. ದೆಹಲಿಯಲ್ಲಿಂದು ಪ್ರಧಾನಿ ನರೇಂದ್ರ ಮೋದಿ ಯುರೋಪಿಯನ್ ಕಮೀಷನ್ ಅಧ್ಯಕ್ಷರೊಂದಿಗೆ ನಿಯೋಗ ಮಟ್ಟದ ಮಾತುಕತೆ
2. ಜಹಾನ್ ಎ ಖುಸ್ರೌ ಸೂಫಿ ಸಂಗೀತೋತ್ಸವದಲ್ಲಿಂದು ಪ್ರಧಾನಿ ಭಾಗಿ
3. ದೇಶಾದ್ಯಂತ ಇಂದು ರಾಷ್ಟ್ರೀಯ ವಿಜ್ಞಾನ ದಿನ ಆಚರಣೆ
4. ಮಹಿಳಾ ಪ್ರೀಮಿಯರ್ ಲೀಗ್; ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಗುಜರಾತ್ ಜೈಂಟ್ಸ್‌ಗೆ 6 ವಿಕೆಟ್ ಜಯ

******************

ದೆಹಲಿಯಲ್ಲಿಂದು ಪ್ರಧಾನಿ ನರೇಂದ್ರ ಮೋದಿ, ಯುರೋಪಿಯನ್ ಕಮಿಷನ್‌ನ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೇಯೆನ್ ಅವರೊಂದಿಗೆ ನಿಯೋಗ ಮಟ್ಟದ ಮಾತುಕತೆ ನಡೆಸಲಿದ್ದಾರೆ.

ಐರೋಪ್ಯ ಒಕ್ಕೂಟದ ಒಟ್ಟು 27 ಆಯುಕ್ತರಲ್ಲಿ 22 ಆಯುಕ್ತರೊಂದಿಗೆ ಎರಡು ದಿನಗಳ ಭಾರತ ಭೇಟಿಗಾಗಿ ವಾನ್ ಡೆರ್ ಲೇಯೆನ್ ಅವರು ನಿನ್ನೆ ದೆಹಲಿಗೆ ಆಗಮಿಸಿದರು. ಭಾರತಕ್ಕೆ ಐರೋಪ್ಯ ಒಕ್ಕೂಟದ ಆಯುಕ್ತರ ನಿಯೋಗದ ಮೊದಲ ಭೇಟಿ ಇದು ಕಳೆದ ವರ್ಷ ಡಿಸೆಂಬರ್‌ನಲ್ಲಿ ಅಧಿಕಾರ ವಹಿಸಿಕೊಂಡ ನೂತನ ಆಯುಕ್ತರ ನಿಯೋಗದ ಯುರೋಪ್ ಹೊರಗಿನ ಮೊದಲ ಪ್ರವಾಸ ಇದಾಗಿದೆ. ಬೆಳೆಯುತ್ತಿರುವ ಸಹಯೋಗಗಳ ಆಧಾರದ ಮೇಲೆ ಈ ಭೇಟಿಯು ದ್ವಿಪಕ್ಷೀಯ ಸಂಬಂಧಗಳನ್ನು ಮತ್ತಷ್ಟು ಬಲಪಡಿಸುವ ನಿರೀಕ್ಷೆಯಿದೆ.

ಭಾರತ ಮತ್ತು ಯುರೋಪ್ 2004 ರಿಂದ ಕಾರ್ಯತಂತ್ರದ ಪಾಲುದಾರರಾಗಿದ್ದು, ಉಭಯ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಸಂಬಂಧಗಳು ಬಹು–ಆಯಾಮದೊಂದಿಗೆ ವ್ಯಾಪಾರ, ಹೂಡಿಕೆ, ಹವಾಮಾನ ಬದಲಾವಣೆ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ವಿಸ್ತರಿಸಿವೆ.

ಐರೋಪ್ಯ ಒಕ್ಕೂಟದ ಸರಕುಗಳಲ್ಲಿ ಭಾರತದ ಅತಿದೊಡ್ಡ ವ್ಯಾಪಾರ ಪಾಲುದಾರ ರಾಷ್ಟ್ರವಾಗಿದೆ. ಕಳೆದ ಒಂದು ದಶಕದಲ್ಲಿ ದ್ವಿಪಕ್ಷೀಯ ವ್ಯಾಪಾರ ಶೇಕಡಾ 90 ರಷ್ಟು ಬೆಳೆದಿದೆ. 2023–24ರಲ್ಲಿ ಐರೋಪ್ಯ ಒಕ್ಕೂಟದೊಂದಿಗೆ ಸರಕುಗಳಲ್ಲಿನ ದ್ವಿಪಕ್ಷೀಯ ವ್ಯಾಪಾರ 135 ಶತಕೋಟಿ ಡಾಲರ್‌ಗಳಷ್ಟಿತ್ತು.

ನವೀಕರಿಸಬಹುದಾದ ಮತ್ತು ಹೈಡ್ರೋಜನ್ ವಲಯದಲ್ಲಿ ಭಾರತ ಮತ್ತು ಯುರೋಪಿಯನ್ ಕಂಪನಿಗಳ ನಡುವೆ ವ್ಯಾಪಕವಾದ ಕೈಗಾರಿಕಾ ಸಹಯೋಗಗಳಿದ್ದು, ಭಾರತದ ಸೌರಶಕ್ತಿಯ ಪ್ರಮುಖ ಜಾಗತಿಕ ಉಪಕ್ರಮವಾದ ಅಂತಾರಾಷ್ಟ್ರೀಯ ಸೌರ ಒಕ್ಕೂಟಕ್ಕೆ ಐರೋಪ್ಯ ಒಕ್ಕೂಟ ಸೇರ್ಪಡೆಗೊಂಡಿದೆ.

******************

ಪ್ರಧಾನಿ ನರೇಂದ್ರ ಮೋದಿ ನವದೆಹಲಿಯ ಸುಂದರ್ ನರ್ಸರಿಯಲ್ಲಿಂದು ನಡೆಯಲಿರುವ ಸೂಫಿ ಸಂಗೀತೋತ್ಸವ – ಜಹಾನ್–ಎ–ಖುಸ್ರೌ 2025 ರಲ್ಲಿ ಭಾಗವಹಿಸಲಿದ್ದಾರೆ.

ಪ್ರಸಕ್ತ ವರ್ಷ ಈ ಭವ್ಯ ಸೂಫಿ ಸಂಗೀತ ಉತ್ಸವದ 25 ನೇ ವಾರ್ಷಿಕೋತ್ಸವವೂ ಆಗಿದ್ದು, ದೇಶ–ವಿದೇಶಗಳ ಕಲಾವಿದರು, ಅಮೀರ್ ಖುಸ್ರೌ ಅವರ ಪರಂಪರೆಯನ್ನು ಆಚರಿಸುವ ಒಂದು ವೇದಿಕೆಯಾಗಿದೆ. ರೂಮಿ ಫೌಂಡೇಶನ್ ಆಯೋಜಿಸಿರುವ ಈ ಉತ್ಸವ ಇಂದಿನಿಂದ ಮಾರ್ಚ್ 2 ರವರೆಗೆ ನಡೆಯಲಿದೆ. ಈ ಕಾರ್ಯಕ್ರಮವನ್ನು 2001 ರಲ್ಲಿ ಪ್ರಸಿದ್ಧ ಚಲನಚಿತ್ರ ನಿರ್ಮಾಪಕ ಮತ್ತು ಕಲಾವಿದ ಮುಜಾಫರ್ ಅಲಿ ಪ್ರಾರಂಭಿಸಿದರು.

ಕಾರ್ಯಕ್ರಮದ ಸಂದರ್ಭದಲ್ಲಿ ಪ್ರಧಾನಿ, ತೇಹ್ ಬಜಾರ್ ಗೆ ಭೇಟಿ ನೀಡಲಿದ್ದಾರೆ, ಇದು, ಒಂದು ಜಿಲ್ಲೆ–ಒಂದು ಉತ್ಪನ್ನ ಕರಕುಶಲ ವಸ್ತುಗಳು ಮತ್ತು ದೇಶಾದ್ಯಂತದ ವಿವಿಧ ಕಲಾಕೃತಿಗಳ ಪ್ರದರ್ಶನದ ಜೊತೆಗೆ ಕರಕುಶಲ ವಸ್ತುಗಳು ಮತ್ತು ಕೈಮಗ್ಗಗಳ ಕುರಿತ ಕಿರುಚಿತ್ರ ಪ್ರದರ್ಶನಗಳನ್ನು ಒಳಗೊಂಡಿರುತ್ತದೆ.

******************

ದೇಶಾದ್ಯಂತ ಇಂದು ರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸಲಾಗುತ್ತಿದೆ. ಖ್ಯಾತ ಭೌತಶಾಸ್ತ್ರಜ್ಞ ಸರ್ ಸಿ.ವಿ. ರಾಮನ್ ಅವರ 'ರಾಮನ್ ಎಫೆಕ್ಟ್'ನ ಆವಿಷ್ಕಾರದ ಸ್ಮರಣಾರ್ಥ ಪ್ರತಿ ವರ್ಷ ಫೆಬ್ರವರಿ 28 ರಂದು ಈ ದಿನವನ್ನು ಆಚರಿಸಲಾಗುತ್ತದೆ. ಈ ಪರಿವರ್ತನಾಶೀಲ ಆವಿಷ್ಕಾರಕ್ಕಾಗಿ ಸರ್ ರಾಮನ್ ಅವರಿಗೆ 1930 ರಲ್ಲಿ ನೊಬೆಲ್ ಪ್ರಶಸ್ತಿ ನೀಡಲಾಯಿತು. ರಾಷ್ಟ್ರೀಯ ವಿಜ್ಞಾನ ದಿನದ ಹಿನ್ನೆಲೆಯಲ್ಲಿ ದೇಶಾದ್ಯಂತ ವಿವಿಧ ವಿಜ್ಞಾನ ವಿಷಯಾಧಾರಿತ ಚಟುವಟಿಕೆಗಳು ಹಾಗೂ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಒಳಗೊಂಡಿದೆ. ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಜಿತೇಂದ್ರ ಸಿಂಗ್ ಅವರಿಂದು 'ರಾಷ್ಟ್ರೀಯ ವಿಜ್ಞಾನ ದಿನದ ಆಚರಣೆಯಲ್ಲಿ ಭಾಗವಹಿಸಲಿದ್ದಾರೆ.

ವಿಕ್ಷಿತ್ ಭಾರತ್‌ಗಾಗಿ ವಿಜ್ಞಾನ ಮತ್ತು ನಾವೀನ್ಯತೆಯಲ್ಲಿ ಜಾಗತಿಕ ನಾಯಕತ್ವಕ್ಕಾಗಿ ಭಾರತೀಯ ಯುವಕರ ಸಬಲೀಕರಣ ಈ ವರ್ಷದ ರಾಷ್ಟ್ರೀಯ ವಿಜ್ಞಾನ ದಿನದ ಧ್ಯೇಯವಾಕ್ಯವಾಗಿದೆ ಎಂದು ನಮ್ಮ ಬಾತ್ಮೀದಾರರು ವರದಿ ಮಾಡಿದ್ದಾರೆ.

ವಿಜ್ಞಾನದ ಮಹತ್ವ ಮತ್ತು ಅದರ ಅನ್ವಯದ ಕುರಿತು ಜನರಲ್ಲಿ ಅರಿವು ಮೂಡಿಸುವುದು ಈ ದಿನದ ಗುರಿಯಾಗಿದೆ. ಮನುಕುಲದ ಕಲ್ಯಾಣಕ್ಕಾಗಿ ವೈಜ್ಞಾನಿಕ ಕ್ಷೇತ್ರದಲ್ಲಿನ ಎಲ್ಲಾ ಚಟುವಟಿಕೆಗಳು, ಪ್ರಯತ್ನಗಳು ಮತ್ತು ಸಾಧನೆಗಳನ್ನು ಹಾಗೂ ವಿಜ್ಞಾನದ ಅಭಿವೃದ್ಧಿಗಾಗಿ ನೂತನ ತಂತ್ರಜ್ಞಾನಗಳ ಅನುಷ್ಠಾನವನ್ನು ಪ್ರದರ್ಶಿಸುವ ಗುರಿಯನ್ನು ಈ ದಿನ ಹೊಂದಿದೆ.

******************

ದೆಹಲಿ ವಿಧಾನಸಭೆಯಲ್ಲಿಂದು ಹಿಂದಿನ ಆಮ್ ಆದ್ಮಿ ಪಕ್ಷದ ಆಡಳಿತಕ್ಕೆ ಸಂಬಂಧಿಸಿದ ಮತ್ತೊಂದು ಸಿಎಜಿ ವರದಿಯನ್ನು ಮಂಡಿಸಲಾಗುವುದು ಈ ವರದಿ ಸಾರ್ವಜನಿಕ ಆರೋಗ್ಯ ಮೂಲ ಸೌಕರ್ಯ ಮತ್ತು ಆರೋಗ್ಯ ಸೇವೆಗಳ ನಿರ್ವಹಣೆಯ ಕುರಿತಾಗಿದ್ದು, ಮುಖ್ಯಮಂತ್ರಿ ರೇಖಾ ಗುಪ್ತಾ ವರದಿಯನ್ನು ವಿಧಾನಸಭೆಯಲ್ಲಿ ಮಂಡಿಸಲಿದ್ದಾರೆ.

ಮೂರು ದಿನಗಳ ಹಿಂದೆ ಆಪ್ ಸರ್ಕಾರದ ಮದ್ಯ ನೀತಿಗೆ ಸಂಬಂಧಿಸಿದ ಸಿಎಜಿ ವರದಿಯನ್ನು ವಿಧಾನಸಭೆಯಲ್ಲಿ ಮಂಡಿಸಲಾಗಿದ್ದು, ಸಗಟು ವ್ಯಾಪಾರಿಗಳು ಚಿಲ್ಲರೆ ವ್ಯಾಪಾರಿಗಳು, ಹೋಟೆಲ್, ಕ್ಲಬ್ ಮತ್ತು ರೆಸ್ಟೋರೆಂಟ್‌ಗಳಿಗೆ ಪರವಾನಗಿ ನೀಡುವಲ್ಲಿ ಆಗಿರುವ ಹಲವಾರು ನಿಯಮ ಉಲ್ಲಂಘನೆಯನ್ನು ವರದಿ ಎತ್ತಿ ತೋರಿಸಿದೆ.

******************

ಹಣಕಾಸು ಕಾರ್ಯದರ್ಶಿ ತುಹಿನ್ ಕಾಂತಾ ಪಾಂಡೆ ಅವರನ್ನು ಸೆಕ್ಯೂರಿಟೀಸ್ ಆಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ–ಸೆಬಿಯ ನೂತನ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.

ತುಹಿನ್ ಅವರು ಮೂರು ವರ್ಷಗಳ ಅವಧಿಗೆ ಈ ಅಧಿಕಾರ ವಹಿಸಿಕೊಳ್ಳುತ್ತಿದ್ದಾರೆ.

******************

ಬಿಹಾರ, ಪಶ್ಚಿಮ ಬಂಗಾಳ, ಸಿಕ್ಕಿಂ ಮತ್ತು ನೇಪಾಳದ ಹಲವು ಭಾಗಗಳಲ್ಲಿ ಇಂದು ಮುಂಜಾನೆ ಭೂಕಂಪನ ಸಂಭವಿಸಿದ್ದು, ರಿಕ್ಟರ್ ಮಾಪಕದಲ್ಲಿ 5.5 ತೀವ್ರತೆಯ ದಾಖಲೆಯಾಗಿದೆ. ಭೂಕಂಪನದ ಕೇಂದ್ರ ಬಿಂದು ನೇಪಾಳದಲ್ಲಿದೆ ಎಂದು ರಾಷ್ಟ್ರೀಯ ಭೂಕಂಪ ಶಾಸ್ತ್ರ ಕೇಂದ್ರ–ಎನ್‌ಸಿಎಸ್ ತಿಳಿಸಿದೆ.

ಬೆಳಗಿನ ಜಾವ 2 ಗಂಟೆ 36 ನಿಮಿಷದ ಸುಮಾರಿಗೆ ನೇಪಾಳದ ಬಾಗ್‌ಮತಿ ಪ್ರಾಂತ್ಯದ ಕೊಡಾರಿಯಿಂದ 16 ಕಿಲೋಮೀಟರ್ ದೂರದಲ್ಲಿ ಭೂಕಂಪ ಸಂಭವಿಸಿದೆ.

******************

ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಚೀನಾದಿಂದ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲೆ ಶೇಕಡ 10ರಷ್ಟು ಹೆಚ್ಚುವರಿ ಸುಂಕವನ್ನು ಘೋಷಿಸಿದ್ದಾರೆ. ಹಾಗೂ ಮುಂದಿನ ಮಂಗಳವಾರದಿಂದ ಕೆನಡಾ ಹಾಗೂ ಮೆಕ್ಸಿಕೊ ಮೇಲೆ ಕೂಡ ಹೆಚ್ಚುವರಿ ಸುಂಕ ವಿಧಿಸಲು ಯೋಜಿಸಿದ್ದಾರೆ.

ಈಗಾಗಲೇ ಚೀನಾದ ಆಮದು ಪದಾರ್ಥಗಳ ಮೇಲೆ ಶೇಕಡ 10ರಷ್ಟು ಸುಂಕ ವಿಧಿಸಲಾಗಿದೆ.

******************

ಒಡಿಶಾದ ಖ್ಯಾತ ಚಲನಚಿತ್ರ ನಟ ಉತ್ತಮ್ ಮೊಹಾಂತಿ ಕಳೆದ ರಾತ್ರಿ ಗುರುಗ್ರಾಮದಲ್ಲಿ ನಿಧನರಾಗಿದ್ದಾರೆ. ಅವರಿಗೆ 66 ವರ್ಷ ವಯಸ್ಸಾಗಿತ್ತು. ಆಸ್ಪತ್ರೆಯಲ್ಲಿ ಲಿವರ್ ಸಿರಾಸಿಸ್ ಕಾಯಿಲೆಗೆ ಅವರು ಚಿಕಿತ್ಸೆ ಪಡೆಯುತ್ತಿದ್ದರು.

ಒಡಿಶಾದ ಚಿತ್ರರಂಗದ ಪ್ರಸಿದ್ಧ ಕಲಾವಿದರಾಗಿ ಅವರು 130ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿ, ಪ್ರಾದೇಶಿಕ ಸಿನಿಮಾದ ಮೇಲೆ ತಮ್ಮದೇ ಆದ ಛಾಪು ಮೂಡಿಸಿದ್ದರು.

******************

ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕಳೆದ ರಾತ್ರಿ ನಡೆದ ಮಹಿಳಾ ಪ್ರೀಮಿಯರ್ ಲೀಗ್–ಡಬ್ಲ್ಯೂಪಿಎಲ್ ಟಿ–20 ಕ್ರಿಕೆಟ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಗುಜರಾತ್ ಜೈಂಟ್ಸ್ ತಂಡ 6 ವಿಕೆಟ್‌ಗಳಿಂದ ಗೆಲುವು ಸಾಧಿಸಿದೆ.

ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 125 ರನ್ ಗಳಿಸಿತು. ಇದಕ್ಕೆ ಉತ್ತರವಾಗಿ ಗುಜರಾತ್ ತಂಡ 16.3 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 126 ರನ್ ಗಳಿಸಿ ಗೆಲುವು ತನ್ನದಾಗಿಸಿಕೊಂಡಿದೆ.

ಇಂದು ಇದೇ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಹಾಗೂ ಮುಂಬೈ ಇಂಡಿಯನ್ಸ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ರಾತ್ರಿ 7.30ಕ್ಕೆ ಆರಂಭವಾಗಲಿದೆ.

******************

ಬೆಂಗಳೂರು ಓಪನ್ ಟೆನಿಸ್‌ನಲ್ಲಿ ಶ್ರೇಯಾಂಕರಹಿತ ಭಾರತೀಯ ಜೋಡಿ ಸಿದ್ಧಾಂತ್ ಬಂಥಿಯಾ ಮತ್ತು ಪರೀಕ್ಷಿತ್ ಸೋಮಾನಿ ನಿಕೋಲಸ್ ಮೆಜಿಯಾ ಮತ್ತು ಬರ್ನಾರ್ಡ್ ಟಾಮಿಕ್ ವಿರುದ್ಧ 7–5, 6–0 ಅಂತರದಲ್ಲಿ ಜಯಗಳಿಸಿ ಪುರುಷರ ಡಬಲ್ಸ್ ಸೆಮಿಫೈನಲ್‌ಗೆ ಲಗ್ಗೆ ಇಟ್ಟಿದ್ದಾರೆ. ಇಂದು ಫೈನಲ್‌ನಲ್ಲಿ ಸ್ಥಾನ ಪಡೆಯಲು ಅವರು ಆಸ್ಟ್ರೇಲಿಯಾದ ಬ್ಲೇಕ್ ಬೇಲ್ಡನ್ ಮತ್ತು ಮ್ಯಾಥ್ಯೂ ಕ್ರಿಸ್ಟೋಫರ್ ರೊಮಿಯೊಸ್ ಅವರನ್ನು ಎದುರಿಸಲಿದ್ದಾರೆ.

ಇದಕ್ಕೂ ಮೊದಲು, ಡಬಲ್ಸ್ ವಿಭಾಗದಲ್ಲಿ ಹಾಲಿ ಚಾಂಪಿಯನ್‌ಗಳಾದ ರಾಮಕುಮಾರ್ ರಾಮನಾಥನ್ ಮತ್ತು ಸಾಕೇತ್ ಮೈನೇನಿ, ಹೈನೆಕ್ ಬಾರ್ಟನ್ ಮತ್ತು ಎರಿಕ್ ವ್ಯಾನ್‌ಶೆಲ್‌ಬೋಯಿಮ್ ವಿರುದ್ಧ 6–3, 6–3 ಅಂತರದಲ್ಲಿ ಜಯಗಳಿಸಿ ಸೆಮಿಫೈನಲ್‌ಗೆ ಮುನ್ನಡೆದರು. ಫೈನಲ್‌ನಲ್ಲಿ ಸ್ಥಾನ ಪಡೆಯಲು ಅವರು ಇಂದು ಭಾರತದ ಅನಿರುದ್ಧ್ ಚಂದ್ರಶೇಖರ್ ಮತ್ತು ಚೀನಾದ ರೇ ಹೋ ಜೋಡಿಯನ್ನು ಎದುರಿಸಲಿದ್ದಾರೆ.

******************

ನವದೆಹಲಿಯ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ನಿನ್ನೆ ನಡೆದ ಇಂಡಿಯನ್ ಸೂಪರ್ ಲೀಗ್–ಐಎಸ್‌ಎಲ್ ಫುಟ್‌ಬಾಲ್ ಪಂದ್ಯದಲ್ಲಿ ಎಫ್‌ಸಿ ಗೋವಾ ತಂಡ ಪಂಜಾಬ್ ಎಫ್‌ಸಿ ವಿರುದ್ಧ 1–0 ಅಂತರದ ಗೆಲುವು ದಾಖಲಿಸಿತು.

ಎಫ್‌ಸಿ ಗೋವಾದ ಮುಂದಿನ ಪಂದ್ಯ ಮುಂದಿನ ತಿಂಗಳು 4 ರಂದು ಮೊಹಮ್ಮದನ್ ಎಫ್‌ಸಿ ವಿರುದ್ಧ ಆಡಲಿದೆ.

******************

ಜರ್ಮನ್‌ಯಲ್ಲಿ ನಡೆಯುತ್ತಿರುವ ಜರ್ಮನ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಮಿಶ್ರ ಡಬಲ್ಸ್ ಜೋಡಿ ಧ್ರುವ್ ಕಪಿಲಾ ಮತ್ತು ತನಿಶಾ ಕ್ರಾಸ್ಟೊ ನಿನ್ನೆ ಜರ್ಮನಿಯ ಜೋನ್ಸ್ ರಾಲ್ಫಿ ಜಾನ್ಸೆನ್ ಮತ್ತು ಥಕ್ ಫುವಾಂಗ್ ನ್ಗುಯೆನ್ ವಿರುದ್ಧ 21-10, 21-19 ಅಂತರದಲ್ಲಿ ಜಯಗಳಿಸಿ ಕ್ವಾರ್ಟರ್ ಫೈನಲ್ ತಲುಪಿದರು.

ಇನ್ನು ವಿಶ್ವದ 37 ನೇ ಶ್ರೇಯಾಂಕಿತ ಪ್ರಿಯಾಂಶು ರಾಜಾವತ್ ಫ್ರಾನ್ಸ್‌ನ 18 ನೇ ಶ್ರೇಯಾಂಕಿತ ಟೋಮಾ ಜೂನಿಯರ್ ಪೊಪೊವ್ ವಿರುದ್ಧ ಸೋತು ಟೂರ್ನಿಯಿಂದ ಹೊರಬಿದ್ದರು. 38 ನೇ ಶ್ರೇಯಾಂಕಿತ ಕಿರಣ್ ಜಾರ್ಜ್ ಕೂಡ ಏಳನೇ ಶ್ರೇಯಾಂಕಿತ ಚೀನಾದ ವಾಂಗ್ ಜೆಂಗ್‌ಸಿಂಗ್ ವಿರುದ್ಧ ಸೋಲುವುದರೊಂದಿಗೆ ಟೂರ್ನಿಯಿಂದ ಹೊರಬಿದ್ದರು.

ವಿಶ್ವದ 59 ನೇ ಶ್ರೇಯಾಂಕಿತ ತರುಣ್ ಮನ್ನೆಪಲ್ಲಿ ಪುರುಷರ ಸಿಂಗಲ್ಸ್‌ನಲ್ಲಿ ಕೆನಡಾದ ಬ್ರಿಯಾನ್ ಯಾಂಗ್ ವಿರುದ್ಧ 21-14, 15-21, 21-17 ಅಂತರದಲ್ಲಿ ಜಯಗಳಿಸಿದರು.

ಮಹಿಳಾ ಸಿಂಗಲ್ಸ್‌ನಲ್ಲಿ ರಕ್ಷಿತಾ ರಾಮರಾಜ್ ಮತ್ತು ಉನ್ನತಿ ಹೂಡಾ ಕ್ವಾರ್ಟರ್ ಫೈನಲ್‌ಗೆ ಮುನ್ನಡೆದರು. ರಕ್ಷಿತಾ, ಹಾಂಗ್ ಕಾಂಗ್‌ನ ಲೋ ಸಿನ್ ಯಾನ್ ಅವರನ್ನು ಸೋಲಿಸಿದರೆ, ಉನ್ನತಿ ಜಪಾನ್‌ನ ಅಸುಕಾ ಟಕಹಾಶಿ ಅವರನ್ನು 21-13, 21-19 ಅಂತರದಿಂದ ಸೋಲಿಸಿದರು.

*****************